ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 31-12-2003.

*ಈ ವರ್ಷ ನಿಮಿತ್ತ ಮತ್ತು ನಿರ್ಮಾಣರಾಗಿ ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳಿ ಮತ್ತು ಅಖಂಡ ಮಹಾದಾನಿಗಳಾಗಿ.*

**(इस वर्ष निमित्त और निर्माण बन जमा के खाते को बढ़ाओ और अखण्ड महादानी बनो)**

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಅನೇಕ ಭುಜದಾರಿ ಬಾಪ್‌ದಾದಾ ತಮ್ಮ ಎಲ್ಲಾ ಕಡೆಯ ಭುಜಗಳನ್ನು ನೋಡುತ್ತಿದ್ದರು. ಕೆಲವು ಭುಜಗಳು ಸಾಕಾರದಲ್ಲಿ ಸಮ್ಮುಖದಲ್ಲಿದ್ದಾರೆ, ಇನ್ನು ಕೆಲವು ಭುಜಗಳು ಸೂಕ್ಷ್ಮರೂಪದಲ್ಲಿ ಕಾಣಿಸುತ್ತಿದ್ದಾರೆ. ಬಾಪ್‌ದಾದಾ ತಮ್ಮ ಅನೇಕ ಭುಜಗಳನ್ನು ನೋಡಿ ಹರ್ಷಿತರಾಗುತ್ತಿದ್ದರು. ಎಲ್ಲಾ ಭುಜಗಳು ನಂಬರ್‌ವಾರ್ ಬಹಳ ಆಲ್‌ರೌಂಡರ್, ಎವರ್ ರೆಡಿ, ಆಜ್ಞಾಕಾರಿ ಭುಜಗಳಾಗಿದ್ದಾರೆ. ಕೇವಲ ಬಾಪ್‌ದಾದಾರವರು ಸೂಚನೆ ಕೊಟ್ಟರೆ ಸಾಕು ಬಲಭುಜಗಳಾದ ಮಕ್ಕಳು ಹೇಳುತ್ತಾರೆ - ಆಯಿತು ಬಾಬಾ, ಬಂದುಬಿಟ್ಟೆವು ಬಾಬಾ. ಇಂತಹ ಅನನ್ಯ ಮಕ್ಕಳನ್ನು ನೋಡಿ ಎಷ್ಟೊಂದು ಖುಷಿಯಾಗುತ್ತದೆ! ಬಾಪ್‌ದಾದಾರವರಿಗೆ ಆತ್ಮಿಕ ನಶೆ ಇದೆ - ಬಾಪ್‌ದಾದಾರವರ ವಿನಃ ಮತ್ತ್ಯಾವುದೇ ಧರ್ಮಾತ್ಮರಿಗಾಗಲಿ, ಮಹಾತ್ಮರಿಗಾಗಲಿ ಇಂತಹ ಮತ್ತು ಇಷ್ಟೊಂದು ಸಹಯೋಗಿ ಭುಜಗಳು ಸಿಗುವುದಿಲ್ಲ. ನೋಡಿ, ಇಡೀ ಕಲ್ಪದಲ್ಲಿ ಪರಿಕ್ರಮಣ ಮಾಡಿದರೆ ಇಂತಹ ಭುಜಗಳು ಯಾರಿಗಾದರೂ ಸಿಕ್ಕಿದ್ದಾರೆಯೇ? ಅಂದಾಗ ಬಾಪ್‌ದಾದಾ ಪ್ರತಿಯೊಂದು ಭುಜದ ವಿಶೇಷತೆಯನ್ನು ನೋಡುತ್ತಿದ್ದರು. ತಾವು ಇಡೀ ವಿಶ್ವದಿಂದ ಆರಿಸಲ್ಪಟ್ಟಿರುವ ವಿಶೇಷ ಭುಜಗಳಾಗಿದ್ದೀರಿ, ಪರಮಾತ್ಮನ ಸಹಯೋಗಿ ಭುಜಗಳಾಗಿದ್ದೀರಿ. ನೋಡಿ, ಇಂದು ಈ ಹಾಲ್‌ನಲ್ಲಿಯೂ ಎಷ್ಟೊಂದು ಮಂದಿ ತಲುಪಿಬಿಟ್ಟಿದ್ದೀರಿ! (ಇಂದು ಹಾಲ್‌ನಲ್ಲಿ 18000ಗಿಂತಲೂ ಹೆಚ್ಚಿನ ಸಹೋದರ-ಸಹೋದರಿಯರು ಕುಳಿತಿದ್ದಾರೆ) ಎಲ್ಲರೂ ತಮ್ಮನ್ನು ಪರಮಾತ್ಮನ ಭುಜವಾಗಿದ್ದೇನೆ ಎಂದು ಅನುಭವ ಮಾಡುತ್ತೀರಾ? ನಶೆ ಇದೆಯಲ್ಲವೇ!

ಬಾಪ್‌ದಾದಾರವರಿಗೆ ಇದೇ ಖುಷಿ ಇದೆ - ಎಲ್ಲಾ ಕಡೆಯಿಂದ ಹೊಸ ವರ್ಷವನ್ನು ಆಚರಿಸಲು ಎಲ್ಲರೂ ಬಂದು ತಲುಪಿದ್ದೀರಿ ಆದರೆ ಹೊಸವರ್ಷವು ಏನನ್ನು ನೆನಪು ತರಿಸುತ್ತದೆ? ಹೊಸಯುಗ, ಹೊಸಜನ್ಮ. ಎಷ್ಟು ಅತೀ ಹಳೆಯ ಅಂತಿಮ ಜನ್ಮವಾಗಿದೆಯೋ ಅಷ್ಟು ಹೊಸ ಜನ್ಮವು ಎಷ್ಟು ಸುಂದರವಾಗಿರುತ್ತದೆ! ಇದು ಶ್ಯಾಮ ಮತ್ತು ಅದು ಸುಂದರ. ಇನ್ನೂ ಸ್ಪಷ್ಟ ಎಂದರೆ ಹೇಗೆ ಇಂದಿನ ದಿನ ಹಳೆಯ ವರ್ಷವೂ ಸ್ಪಷ್ಟವಾಗಿದೆ ಮತ್ತು ಹೊಸವರ್ಷವೂ ಸಮ್ಮುಖದಲ್ಲಿ ಸ್ಪಷ್ಟವಾಗಿದೆಯೋ ಹಾಗೆಯೇ ತಮ್ಮ ಹೊಸಯುಗ ಹೊಸಜನ್ಮವೂ ಸ್ಪಷ್ಟವಾಗಿ ಸಮ್ಮುಖದಲ್ಲಿ ಬರುತ್ತಿದೆಯೇ? ಇಂದು ಕೊನೆಯ ಜನ್ಮದಲ್ಲಿ ಇದ್ದೀರಿ, ನಾಳೆ ಮೊದಲಿನ ಜನ್ಮದಲ್ಲಿ ಇರುತ್ತೀರಿ. ಇದು ಸ್ಪಷ್ಟವಾಗಿದೆಯೇ? ಸಮ್ಮುಖದಲ್ಲಿ ಬರುತ್ತಿದೆಯೇ? ಯಾರು ಆದಿಯ ಮಕ್ಕಳಿದ್ದಾರೆಯೋ ಅವರು ಬ್ರಹ್ಮಾತಂದೆಯನ್ನು ಅನುಭವ ಮಾಡಿದಿರಿ, ಬ್ರಹ್ಮಾತಂದೆಗೆ ಹೇಗೆ ತಮ್ಮ ಹೊಸ ಜನ್ಮದ ರಾಜ್ಯಪದವಿಯ ಶರೀರರೂಪೀ ವಸ್ತ್ರವು ಸದಾ ಮುಂದೆ ಕಾಣಿಸುತ್ತಿತ್ತು. ಯಾರೇ ಮಕ್ಕಳು ಮಿಲನ ಮಾಡಲು ಹೋದಾಗ ಅವರು ಅನುಭವ ಮಾಡುತ್ತಿದ್ದರು, ಬ್ರಹ್ಮಾತಂದೆಯ ಅನುಭವ ಹೀಗಿತ್ತು - ಇಂದು ನಾನು ವೃದ್ಧನಾಗಿದ್ದೇನೆ ಆದರೆ ನಾನೇ ನಾಳೆ ಚಿಕ್ಕ ಮಗುವಿನ ಶರೀರವನ್ನು ಧಾರಣೆ ಮಾಡುತ್ತೇನೆ. ಈ ಅನುಭವವು ಆದಿಯ ಹಳೆಯ ಮಕ್ಕಳಿಗೆ ನೆನಪಿದೆಯೇ? ಇದು ಇಂದು ಮತ್ತು ನಾಳೆಯ ಆಟವಾಗಿದೆ ಅಂದಮೇಲೆ ಭವಿಷ್ಯವೂ ಸಹ ಇಷ್ಟೊಂದು ಸ್ಪಷ್ಟವಾಗಿ ಅನುಭವವಾಗಬೇಕು. ಇಂದು ಸ್ವರಾಜ್ಯ ಅಧಿಕಾರಿಗಳಾಗಿದ್ದೀರಿ. ನಾಳೆ ವಿಶ್ವರಾಜ್ಯಾಧಿಕಾರಿಗಳಾಗುತ್ತೀರಿ, ಈ ನಶೆ ಇದೆಯೇ? ನೋಡಿ ಇಂದು ಮಕ್ಕಳು ಕಿರೀಟವನ್ನು ಧಾರಣೆ ಮಾಡಿ ಕುಳಿತಿದ್ದಾರೆ (ಡಬಲ್ ವಿದೇಶಿ ಮಕ್ಕಳು ರಿಟ್ರೀಟ್‌ನಾಗಿ ಬಂದಿದ್ದಾರೆ). ನಶೆ ಇದೆಯೇ? ಕಿರೀಟವನ್ನು ಧರಿಸುವುದರಿಂದ ಯಾವ ನಶೆ ಇದೆ? ಇವರು ಫರಿಶ್ತೆಗಳ ನಶೆಯಲ್ಲಿ ಇದ್ದಾರೆ. ನಾವು ನಶೆಯಲ್ಲಿ ಇದ್ದೇವೆ ಎಂದು ಕೈಯನ್ನು ಅಲುಗಾಡಿಸುತ್ತಿದ್ದಾರೆ.

ಅಂದಾಗ ಈ ವರ್ಷದಲ್ಲಿ ಏನು ಮಾಡುತ್ತೀರಿ? ಹೊಸ ವರ್ಷದಲ್ಲಿ ಯಾವ ನವೀನತೆಯನ್ನು ಮಾಡಿ ತೋರಿಸುತ್ತಿರಿ? ಯೋಜನೆಗಳನ್ನು ಮಾಡಿದ್ದೀರಾ? ಏನು ನವೀನತೆ ಮಾಡುತ್ತೀರಿ? ಸಮಾರಂಭಗಳನ್ನಂತೂ ಮಾಡುತ್ತಿರುತ್ತೀರಿ, ಒಂದು ಲಕ್ಷ ಜನರ ಸಭೆಯನ್ನು ಮಾಡಿದಿರಿ, ಎರಡು ಲಕ್ಷದ್ದನ್ನೂ ಮಾಡಿದಿರಿ. ಆದರೆ ಯಾವ ನವೀನತೆಯನ್ನು ಮಾಡಿ ತೋರಿಸುತ್ತೀರಿ? ಇಂದಿನ ಆತ್ಮರು ಒಂದುಕಡೆ ಸ್ವಪ್ರಾಪ್ತಿಗಾಗಿಯೂ ಇಚ್ಛುಕರಾಗಿದ್ದಾರೆ ಆದರೆ ಧೈರ್ಯಹೀನರಾಗಿದ್ದಾರೆ, ಧೈರ್ಯವಿಲ್ಲ. ಕೇಳುವುದುಕ್ಕೂ ಬಯಸುತ್ತಾರೆ ಆದರೆ ಆಗುವ ಧೈರ್ಯವಿಲ್ಲ. ಇಂತಹ ಆತ್ಮರನ್ನು ಪರಿವರ್ತನೆ ಮಾಡುವುದಕ್ಕೋಸ್ಕರ ಮೊದಲು ಆತ್ಮರಿಗೆ ಸಾಹಸ(ಧೈರ್ಯ)ದ ರೆಕ್ಕೆಗಳನ್ನು ನೀಡಿ. ಸಾಹಸದ ರೆಕ್ಕೆಗಳ ಆಧಾರವು ಅನುಭವವಾಗಿದೆ ಅಂದಾಗ ಅನುಭವ ಮಾಡಿಸಿ. ಅನುಭವವು ಇಂತಹ ವಸ್ತುವಾಗಿದೆ - ಸ್ವಲ್ಪ ಅಂಚಲಿ ಸಿಕ್ಕಿದ ನಂತರ ಅನುಭವ ಮಾಡುತ್ತಾರೆಂದರೆ ಅನುಭವದ ರೆಕ್ಕೆಗಳು ಎಂದಾದರೂ ಹೇಳಿ ಅಥವಾ ಅನುಭವದ ಕಾಲುಗಳೆಂದಾದರೂ ಹೇಳಿ ಅದರಿಂದ ಧೈರ್ಯದಲ್ಲಿ ಮುಂದುವರೆಯುತ್ತಾರೆ. ಇದಕ್ಕೋಸ್ಕರ ವಿಶೇಷವಾಗಿ ಈ ವರ್ಷ ನಿರಂತರ ಅಖಂಡ ಮಹಾದಾನಿಗಳಾಗಬೇಕು, ಅಖಂಡ. ಮನಸ್ಸಿನ ಮೂಲಕ ಶಕ್ತಿ ಸ್ವರೂಪರನ್ನಾಗಿ ಮಾಡಿ. ಮಹಾದಾನಿಗಳಾಗಿ ನಿರಂತರ ಶಕ್ತಿಗಳ ಅನುಭವ ಮಾಡಿಸಿ, ಮನಸ್ಸಿನ ಮೂಲಕ, ಪ್ರಕಂಪನಗಳ ಮೂಲಕ ಅನುಭವ ಮಾಡಿಸಿ. ವಾಚಾದ ಮೂಲಕ ಜ್ಞಾನದ ದಾನ ಮಾಡಿ, ಕರ್ಮದ ಮೂಲಕ ಗುಣಗಳ ದಾನ ಮಾಡಿ. ಇಡೀ ದಿನ ಮನಸ್ಸಿನ ಮೂಲಕ ಇಲ್ಲವೇ ವಾಚಾ, ಅಥವಾ ಕರ್ಮ ಮೂರರ ಮೂಲಕ ಅಖಂಡ ಮಹಾದಾನಿಗಳಾಗಿ ಸಮಯ ಪ್ರಮಾಣ ಕೆಲ-ಕೆಲವೊಮ್ಮೆ ದಾನ ಮಾಡುವುದಲ್ಲ, ಅಖಂಡದಾನಿಗಳಾಗಿ ಏಕೆಂದರೆ ಆತ್ಮರಿಗೆ ಈಗ ಇದರ ಅವಶ್ಯಕತೆ ಇದೆ.

ಅಂದಮೇಲೆ ಮಹಾದಾನಿಗಳಾಗುವುದಕ್ಕೋಸ್ಕರ ಮೊದಲು ತಮ್ಮ ಜಮಾದ ಖಾತೆಯನ್ನು ಪರಿಶೀಲನೆ ಮಾಡಿಕೊಳ್ಳಿರಿ. ನಾಲ್ಕೂ ಸಬ್ಜೆಕ್ಟ್ ಗಳಲ್ಲಿ ಜಮಾದ ಖಾತೆಯೂ ಎಷ್ಟು ಪೆರ್ಸೆಂಟ್ನಲ್ಲಿ ಇದೆ? ಒಂದುವೇಳೆ ಸ್ವಯಂನಲ್ಲಿ ಜಮಾದ ಖಾತೆ ಇಲ್ಲವೆಂದರೆ ಮಹಾದಾನಿಗಳು ಹೇಗೆ ಆಗುತ್ತೀರಿ! ಮತ್ತು ಜಮಾದ ಖಾತೆಯನ್ನು ಪರಿಶೀಲನೆ ಮಾಡಿಕೊಳ್ಳುವ ಚಿಹ್ನೆ ಏನಾಗಿದೆ? ಮನಸಾ, ವಾಚಾ, ಕರ್ಮದ ಮೂಲಕ ಸೇವೆಯನ್ನಂತೂ ಮಾಡಿದಿರಿ ಆದರೆ  ಸೇವೆ ಮಾಡುತ್ತಿದ್ದರೂ ಸಹ ಮೊದಲು ಸ್ವಯಂ ಸಂತುಷ್ಟವಾಗಿ ಇರುವುದೇ ಜಮಾದ ಚಿಹ್ನೆ ಆಗಿದೆ. ಜೊತೆ-ಜೊತೆಗೆ ಯಾರ ಸೇವೆ ಮಾಡುತ್ತೀರೋ ಆ ಆತ್ಮರಲ್ಲಿ ಖುಷಿಯ ಸಂತುಷ್ಟತೆ ಬಂದಿತೇ? ಒಂದುವೇಳೆ ಎರಡೂ ಕಡೆ ಸಂತುಷ್ಟತೆ ಇಲ್ಲವೆಂದರೆ ಸೇವೆಯ ಖಾತೆಯಲ್ಲಿ ತಮ್ಮ ಸೇವೆಯ ಫಲವು ಜಮಾ ಆಗಲಿಲ್ಲವೆಂದು ತಿಳಿಯಿರಿ.

ಬಾಪ್‌ದಾದಾರವರು  ಕೆಲ-ಕೆಲವೊಮ್ಮೆ ಮಕ್ಕಳ ಜಮಾದ ಖಾತೆಯನ್ನು ನೋಡುತ್ತಾರೆ. ಅದರಲ್ಲಿ ಕೆಲವೊಂದೆಡೆ ಹೆಚ್ಚಿನ ಪರಿಶ್ರಮವಿದೆ ಆದರೆ ಜಮಾದ ಫಲವು ಕಡಿಮೆ ಇದೆ. ಇದಕ್ಕೆ ಕಾರಣವೇನು? ಎರಡೂ ಕಡೆಯ ಸಂತುಷ್ಟತೆಯ ಕೊರತೆಯಾಗಿದೆ. ಒಂದುವೇಳೆ ಸ್ವಯಂ ಆಗಲಿ ಅನ್ಯರಾಗಲಿ, ಸಂತುಷ್ಟತೆಯ ಅನುಭವ ಮಾಡಲಿಲ್ಲವೆಂದರೆ ಜಮಾದ ಖಾತೆಯು ಕಡಿಮೆ ಆಗುತ್ತದೆ. ಬಾಪ್‌ದಾದಾರವರು ಬಹಳ ಸಹಜವಾಗಿ ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳುವ ಗೋಲ್ಡನ್ ಬೀಗದ ಕೈಯನ್ನು ಮಕ್ಕಳಿಗೆ ಕೊಟ್ಟಿದ್ದೇವೆ. ಆ ಬೀಗದ ಕೈ ಯಾವುದಾಗಿದೆ ಎಂದು ತಿಳಿದಿದೆಯೇ? ಸಿಕ್ಕಿದೆಯಲ್ಲವೇ! ಸಹಜವಾಗಿ ಜಮಾದ ಖಾತೆಯನ್ನು ಸಂಪನ್ನ ಮಾಡಿಕೊಳ್ಳುವ ಬೀಗದ ಕೈ ಯಾವುದೆಂದರೆ ಯಾವುದೇ ಮನಸಾ-ವಾಚಾ-ಕರ್ಮಣಾ ಎಲ್ಲಿಯೇ ಸೇವೆ ಮಾಡುವ ಸಮಯದಲ್ಲಿ ಮೊದಲನೆಯದಾಗಿ ತಮ್ಮಲ್ಲಿ ನಿಮಿತ್ತ ಭಾವದ ಸ್ಮೃತಿ. ನಿಮಿತ್ತ ಭಾವ, ನಿರ್ಮಾಣ ಭಾವ, ಶುಭಭಾವ, ಆತ್ಮಿಕ ಸ್ನೇಹದ ಭಾವ, ಒಂದುವೇಳೆ ಈ ಭಾವದ ಸ್ಥಿತಿಯಲ್ಲಿ ಸ್ಥಿತರಾಗಿ ಸೇವೆ ಮಾಡಿದಾಗ ತಮ್ಮ ಈ ಭಾವದಿಂದ ಸಹಜವಾಗಿ ಆತ್ಮರ ಭಾವನೆಯೂ ಪೂರ್ಣವಾಗಿಬಿಡುತ್ತದೆ. ಇಂದಿನ ಮಾನವರು ಪ್ರತಿಯೊಬ್ಬರ ಭಾವನೆ ಏನೆಂಬುದನ್ನು ನೋಟ್ ಮಾಡುತ್ತಾರೆ. ಇವರು ನಿಮಿತ್ತ ಭಾವದಿಂದ ಮಾಡುತ್ತಿದ್ದಾರೆಯೇ ಅಥವಾ ಅಭಿಮಾನದ ಭಾವದಿಂದ ಮಾಡುತ್ತಿದ್ದಾರೆಯೇ! ಎಲ್ಲಿ ನಿಮಿತ್ತ ಭಾವವಿದೆಯೋ ಅಲ್ಲಿ ನಿರ್ಮಾಣ ಭಾವವೂ ತಾನಾಗಿಯೇ ಬಂದುಬಿಡುತ್ತದೆ. ಆದ್ದರಿಂದ ಏನು ಜಮಾ ಆಯಿತು? ಎಷ್ಟು ಜಮಾ ಆಯಿತು ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿರಿ ಏಕೆಂದರೆ ಈ ಸಮಯದ ಸಂಗಮಯುಗವೇ ಜಮಾ ಮಾಡಿಕೊಳ್ಳುವ ಯುಗವಾಗಿದೆ. ನಂತರ ಇಡೀ ಕಲ್ಪದಲ್ಲಿ ಈಗಿನ ಜಮಾದ ಪ್ರಾಲಬ್ಧವಿರುತ್ತದೆ.

ಅಂದಮೇಲೆ ಈ ವರ್ಷ ವಿಶೇಷವಾಗಿ ಯಾವ ಗಮನ ಕೊಡಬೇಕಾಗಿದೆ? ತಮ್ಮ- ತಮ್ಮ ಜಮಾದ ಖಾತೆಯನ್ನು ಪರಿಶೀಲನೆ ಮಾಡಿಕೊಳ್ಳಿರಿ. ಪರಿಶೀಲಿಸುವವರಾಗಿ, ಪರಿವರ್ತಕರೂ ಸಹ ಆಗಿ ಏಕೆಂದರೆ ಸಮಯದ ಸಮೀಪತೆಯ ಚಿಹ್ನೆಗಳನ್ನು ನೋಡುತ್ತಿದ್ದೀರಿ ಮತ್ತು ಬಾಪ್‌ದಾದಾರವರೊಂದಿಗೆ ನಾವು ಸಮಾನರಾಗುತ್ತೇವೆಂಬ ಪ್ರತಿಜ್ಞೆಯನ್ನು ಮಾಡಿದ್ದೀರಿ? ಪ್ರತಿಜ್ಞೆ ಮಾಡಿದ್ದೀರಾ? ಮಾಡಿದ್ದೀರಲ್ಲವೇ? ಯಾರು ಪ್ರತಿಜ್ಞೆ ಮಾಡಿದ್ದೀರೋ ಅವರು ಕೈಯನ್ನು ಎತ್ತಿರಿ. ಪ್ರತಿಜ್ಞೆಯನ್ನು ಪಕ್ಕಾ ಮಾಡಿದ್ದೀರಾ? ಅಥವಾ ಪರ್ಸೆಂಟೇಜ್ನಲ್ಲಿಯೋ? ಪಕ್ಕಾ ಮಾಡಿದ್ದೀರಲ್ಲವೇ? ಅಂದಮೇಲೆ ಬ್ರಹ್ಮಾ ತಂದೆಯ ಸಮಾನ ಜಮಾದ ಖಾತೆಯೂ ಬೇಕಲ್ಲವೇ! ಬ್ರಹ್ಮಾತಂದೆಯ ಸಮಾನರಾಗಬೇಕೆಂದರೆ ಬ್ರಹ್ಮಾ ತಂದೆಯ ಯಾವ ವಿಶೇಷ ಚರಿತ್ರೆಯನ್ನು ನೋಡಿದಿರಿ? ಆದಿಯಿಂದ ಹಿಡಿದು ಅಂತ್ಯದವರೆಗೆ ಪ್ರತಿಯೊಂದು

ಮಾತಿನಲ್ಲಿ ನಾನು ಎಂದು ಹೇಳಿದರೋ ಅಥವಾ ಬಾಬಾ ಎಂದು ಹೇಳಿದರೋ? ನಾನು ಮಾಡುತ್ತಿದ್ದೇನೆ ಆದರೆ ತಂದೆಯೇ ಮಾಡಿಸುತ್ತಿದ್ದಾರೆ. ಯಾರೊಂದಿಗೆ ಮಿಲನ ಮಾಡಲು ಬಂದಿದ್ದೀರಿ? ತಂದೆಯೊಂದಿಗೆ ಮಿಲನ ಮಾಡಲು ಬಂದಿದ್ದೀರಿ. ನನ್ನತನದ ಅಭಾವ, ವಿದ್ಯೆಯನ್ನು ನೋಡಿದ್ದೀರಲ್ಲವೇ! ನೋಡಿದಿರಾ? ಪ್ರತಿಯೊಂದು ಮುರಳಿಯಲ್ಲಿಯೂ ಬಾಬಾ, ಬಾಬಾ ಎಂದು ಎಷ್ಟು ಸಾರಿ ನೆನಪು ತರಿಸುತ್ತಾರೆ? ಅಂದಾಗ ಸಮಾನರಾಗುವುದು ಎಂಬುದರ ಅರ್ಥವೇ ಆಗಿದೆ - ಮೊದಲು ನಾನು ಎಂಬುದರ ಅಭಾವವಿರಲಿ(ಭಾವನೆ ಇಲ್ಲದಿರುವುದು). ಮೊದಲೇ ತಿಳಿಸಿದ್ದೇವೆ - ಬ್ರಾಹ್ಮಣರ ನನ್ನತನವೂ ಸಹ ಬಹಳ ರಾಯಲ್ ಆಗಿದೆ. ನೆನಪು ಇದೆಯಲ್ಲವೇ? ತಿಳಿಸಿದ್ದೇವಲ್ಲವೇ! ಬಾಪ್‍ದಾದಾರವರ ಪ್ರತ್ಯಕ್ಷತೆಯನ್ನು ಎಲ್ಲರೂ ಬಯಸುತ್ತಾರೆ. ಬಾಪ್‍ದಾದಾರವರ ಪ್ರತ್ಯಕ್ಷತೆ ಮಾಡಬೇಕೆಂಬ ಬಹಳ ಯೋಜನೆಗಳನ್ನು ಮಾಡುತ್ತೀರಿ, ಒಳ್ಳೆಯ ಯೋಜನೆಗಳನ್ನು ಮಾಡುತ್ತೀರಿ, ಬಾಪ್‍ದಾದಾ ಖುಷಿ ಆಗಿದ್ದಾರೆ ಆದರೆ ಈ ರಾಯಲ್ ರೂಪದ ನನ್ನತನವು ಯೋಜನೆಯಲ್ಲಿ, ಸಫಲತೆಯಲ್ಲಿ ಕೆಲವೊಂದು ಪರ್ಸೆಂಟೇಜನ್ನು ಕಡಿಮೆ ಮಾಡಿಬಿಡುತ್ತದೆ. ಸ್ವಾಭಾವಿಕವಾಗಿ ಸಂಕಲ್ಪದಲ್ಲಿ, ಮಾತಿನಲ್ಲಿ, ಕರ್ಮದಲ್ಲಿ, ಪ್ರತಿಯೊಂದು ಸಂಕಲ್ಪದಲ್ಲೂ ಬಾಬಾ ಎಂದರೆ ಬಾಬಾನ ಸ್ಮೃತಿಯಲ್ಲಿ ಇರಿ. ನನ್ನತನವಲ್ಲ. ಬಾಪ್‍ದಾದಾರವರು ಮಾಡಿಸುತ್ತಿದ್ದಾರೆ. ಜಗದಂಬಾರವರ ವಿಶೇಷ ಧಾರಣೆಯೂ ಇದೇ ಆಗಿತ್ತು. ಜಗದಂಬಾರವರ ಘೋಷಣೆಯು ನೆನಪಿದೆಯೇ, ಹಳಬರಿಗೆ ನೆನಪಿರಬೇಕು. ನೆನಪಿದೆಯೇ? ಎಲ್ಲವೂ ಆಜ್ಞೆಯಂತೇ ನಡೆಯುತ್ತಿದೆ, ಮಾಡಿಸುವ ತಂದೆಯು ಮಾಡಿಸುತ್ತಿದ್ದಾರೆ ಎನ್ನುವುದು ಜಗದಾಂಬಾರವರ ವಿಶೇಷ ಧಾರಣೆ ಆಗಿತ್ತು ಅಂದಾಗ ನಂಬರ್ ತೆಗೆದುಕೊಳ್ಳಬೇಕು, ಸಮಾನರಾಗಬೇಕೆಂದರೆ ನಾನು, ನನ್ನತನವು ಸಮಾಪ್ತಿ ಆಗಲಿ, ಮುಖದಿಂದ ತಾನಾಗಿಯೇ ಬಾಬಾ ಶಬ್ಧವು ಬರುತ್ತಿರಲಿ, ಕರ್ಮದಲ್ಲಿ ತಮ್ಮ ಗುಣಗಳಲ್ಲಿ ತಂದೆಯ ಮೂರ್ತಿಯು ಕಾಣಿಸಲಿ ಆಗ ಪ್ರತ್ಯಕ್ಷ ಆಗುವುದು.

**ಬಾಪ್‍ದಾದಾರವರು ಈ ರಾಯಲ್ ರೂಪದ ನಾನು-ನಾನು ಎಂಬ ಗೀತೆಯನ್ನು ಬಹಳ ಕೇಳುತ್ತಾರೆ, ನಾನು ಏನು ಮಾಡಿದೆನೋ ಅದೇ ಸರಿ, ನಾನು ಏನನ್ನು ಯೋಚಿಸಿದೆನೋ ಅದೇ ಸರಿ, ಅದೇ ಆಗಬೇಕು. ಈ ನಾನು ಎನ್ನುವುದು ಮೋಸಗೊಳಿಸುತ್ತದೆ. ಭಲೆ ಯೋಚಿಸಿ, ಹೇಳಿ ಆದರೆ ನಿಮಿತ್ತ ಮತ್ತು ನಿರ್ಮಾಣ ಭಾವದಿಂದ ನಾನು ಎಂದು ಹೇಳಿ.** ಬಾಪ್‍ದಾದಾ ಮೊದಲೂ ಸಹ ಒಂದು ಆತ್ಮಿಕ ವ್ಯಾಯಾಮವನ್ನು ಕಲಿಸಿದ್ದರು, ಅದು ಯಾವುದು? ಈಗೀಗ ಮಾಲೀಕರು, ಈಗೀಗಲೇ ಬಾಲಕರು. ವಿಚಾರವನ್ನು ತಿಳಿಸುವುದರಲ್ಲಿ ಮಾಲೀಕ. ಅದು ಮೆಜಾರಿಟಿ ಆತ್ಮರಿಂದ ಅಂತಿಮ ತೀರ್ಮಾನವಾದಮೇಲೆ ಬಾಲಕತನ. ಈ ಮಾಲಿಕ ಮತ್ತು ಬಾಲಕ..... ಈ ಆತ್ಮಿಕ ವ್ಯಾಯಾಮವು ಅವಶ್ಯಕವಾಗಿದೆ. ಕೇವಲ ಬಾಪ್‍ದಾದಾರವರ ಮೂರು ಶಬ್ಧಗಳ ಶಿಕ್ಷಣವನ್ನು ನೆನಪಿಟ್ಟುಕೊಳ್ಳಿ. ಎಲ್ಲರಿಗೂ ನೆನಪಿದೆಯೇ? **ಮನಸಿನಲ್ಲಿ ನಿರಾಕಾರಿ, ಮಾತಿನಲ್ಲಿ ನಿರಹಂಕಾರಿ, ಕರ್ಮದಲ್ಲಿ ನಿರ್ವಿಕಾರಿ.** ಯಾವಾಗ ಸಂಕಲ್ಪ ಮಾಡಿದರೂ ನಿರಾಕಾರ ಸ್ಥಿತಿಯಲ್ಲಿ ಸ್ಥಿತರಾಗಿ ಸಂಕಲ್ಪ ಮಾಡಿ. ಮತ್ತೆಲ್ಲವೂ ಮರೆತು ಹೋಗಲಿ ಆದರೆ ಮೂರು ಶಬ್ದಗಳನ್ನು ಮರೆಯಬೇಡಿ. ಈ ಸಾಕಾರ ರೂಪದ ಮೂರು ಶಬ್ದಗಳ ಶಿಕ್ಷಣವು ಉಡುಗೊರೆಯಾಗಿದೆ. ಅಂದಾಗ ಬ್ರಹ್ಮಾತಂದೆಯೊಂದಿಗೆ ಸಾಕಾರರೂಪದಲ್ಲಿಯೂ ಬಹಳ ಪ್ರೀತಿಯಿದೆ. ಈಗಲೂ ಸಹ ಕೆಲವರು ಡಬಲ್ ವಿದೇಶಿಯರು ಅನುಭವವನ್ನು ತಿಳಿಸುತ್ತಾರೆ - ಬ್ರಹ್ಮಾತಂದೆಯೊಂದಿಗೆ ಬಹಳ ಪ್ರೀತಿಯಿದೆ. ನೋಡಿಲ್ಲ ಆದರೂ ಸಹ ಪ್ರೀತಿಯಿದೆ. ಇದೆಯೇ? ಡಬಲ್ ವಿದೇಶಿಯರಿಗೆ ಬ್ರಹ್ಮಾ ತಂದೆಯೊಂದಿಗೆ ಹೆಚ್ಚಿನ ಪ್ರೀತಿಯಿದೆಯಲ್ಲವೇ. ಅಂದಮೇಲೆ ಯಾರೊಂದಿಗೆ ಪ್ರೀತಿಯಿರುತ್ತದೆಯೋ ಅವರ

ಕೊಡುಗೆಯನ್ನು ಬಹಳ ಜೋಪಾನವಾಗಿ ಇಟ್ಟುಕೊಳ್ಳುತ್ತಾರೆ. ಭಲೆ ಅದು ಅತೀ ಚಿಕ್ಕ ಉಡುಗೊರೆ ಆಗಿರಬಹುದು ಆದರೆ ಯಾರೊಂದಿಗೆ ಪ್ರೀತಿ ಇರುತ್ತದೆಯೋ ಅವರ ಉಡುಗೊರೆಯನ್ನು ಬಹಳ ಜೋಪಾನವಾಗಿ ಇಟ್ಟುಕೊಳ್ಳುತ್ತಾರೆ, ಬಚ್ಚಿಡುತ್ತಾರೆ ಅಂದಾಗ ಬ್ರಹ್ಮಾ ತಂದೆಯೊಂದಿಗೆ ಪ್ರೀತಿಯಿದೆ ಅಂದರೆ ಈ ಮೂರು ಶಬ್ದಗಳೊಂದಿಗೆ ಪ್ರೀತಿಯಿದೆ. ಇದರಲ್ಲಿ ಸಂಪನ್ನರಾಗುವುದು ಅಥವಾ ಸಮಾನರಾಗುವುದು ಬಹಳ ಸಹಜವಾಗಿಬಿಡುತ್ತದೆ. ಬ್ರಹ್ಮಾತಂದೆಯು ಏನು ಹೇಳಿದರೆಂದು ನೆನಪು ಮಾಡಿಕೊಳ್ಳಿರಿ.

ಹೊಸ ವರ್ಷದಲ್ಲಿ ವಾಚಾದ ಸೇವೆಯನ್ನು ಭಲೆ ಮಾಡಿ, ವಿಜೃಂಭಣೆಯಿಂದ ಮಾಡಿ ಆದರೆ ಅನುಭವ ಮಾಡಿಸುವ ಸೇವೆಯನ್ನು ಸದಾ ಗಮನದಲ್ಲಿ ಇಟ್ಟುಕೊಳ್ಳಿರಿ. ಈ ಸಹೋದರಿಯ ಮೂಲಕ ಇಲ್ಲವೆ ಸಹೋದರನ ಮೂಲಕ ನಮಗೆ ಶಕ್ತಿಯ ಅನುಭವ ಆಯಿತು, ಶಾಂತಿಯ ಅನುಭವ ಆಯಿತು ಎಂದು ಎಲ್ಲರೂ ಅನುಭವ ಮಾಡಲಿ ಏಕೆಂದರೆ ಅನುಭವವನ್ನು ಎಂದೂ ಮರೆಯುವುದಿಲ್ಲ. ಕೇಳಿರುವುದು ಮರೆತುಹೋಗುತ್ತದೆ. ಅದು ಇಷ್ಟವಾಗುತ್ತದೆ ಆದರೆ ಮರೆತುಹೋಗುತ್ತದೆ. ಆದರೆ ಅನುಭವವು ಎಂತಹ ವಸ್ತುವಾಗಿದೆ ಎಂದರೆ ಅದು ಅವರನ್ನು ತಮ್ಮ ಮುಂದೆ ಎಳೆದು ತರುತ್ತದೆ. ಸಂಪರ್ಕದವರು ಸಂಬಂಧದಲ್ಲಿ ಬರುತ್ತಾರೆ ಏಕೆಂದರೆ ಸಂಬಂಧದ ವಿನಃ ಆಸ್ತಿಗೆ ಅಧಿಕಾರಿಗಳಾಗಲು ಸಾಧ್ಯವಿಲ್ಲ ಅಂದಾಗ ಅನುಭವವು ಸಂಬಂಧದಲ್ಲಿ ತರುವಂತಹದ್ದಾಗಿದೆ. ಒಳ್ಳೆಯದು. ತಿಳಿಯಿತೇ? ಏನು ಮಾಡುತ್ತೀರಿ? ಚೆಕ್ ಮಾಡಿಕೊಳ್ಳಿರಿ, ಪರಿಶೀಲಕರಾಗಿರಿ, ಪರಿವರ್ತಕರಾಗಿರಿ. ಅನುಭವ ಮಾಡಿಸುವ ಮೇಕರ್ ಆಗಿ, ಜಮಾದ ಖಾತೆಯನ್ನು ಚೆಕ್ ಮಾಡಿಕೊಳ್ಳುವ ಪರಿಶೀಲಕರಾಗಿರಿ, ಒಳ್ಳೆಯದು. ಎಲ್ಲರೂ ತಂದೆಯ ಹತ್ತಿರ ತಲುಪಿದ್ದೀರಿ. ಆದ್ದರಿಂದ ಬಾಪ್‌ದಾದಾ ಎಲ್ಲರಿಗೂ ಆಶೀರ್ವಾದಗಳೊಂದಿಗೆ ಕೂಡಿರುವ ಪದಮಾ ಪದ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಪಟ್ಟದ ರಾಣಿ ಎನ್ನುತ್ತಿದ್ದಾರೆ. ಇಂದು ಇಡೀ ಸಭೆಯಲ್ಲಿ ಬಹಳಷ್ಟು ಜನ ಪಟ್ಟದರಾಣಿ, ಪಟ್ಟದ ರಾಜರಾಗಿದ್ದೀರಿ. ಕುಳಿತು ಕುಳಿತು ಬೇಸತ್ತಿಲ್ಲ ತಾನೇ? ಕುರ್ಚಿಯ ಮೇಲೆ ಕುಳಿತುಕೊಳ್ಳುವವರಿಗೆ ಪಟ್ಟ(ಹಾಸಿಗೆ) ಲಭಿಸಿದೆ ಆದ್ದರಿಂದ ಸುಸ್ತಾಗಿಲ್ಲ ತಾನೇ? ದುಃಖವೆನಿಸುತ್ತಿಲ್ಲ ತಾನೇ? ಖುಷಿಯಲ್ಲಿ ಎಲ್ಲವನ್ನು ಮರೆತು ಹೋಗುತ್ತೀರಿ. ಈಗ ಎಲ್ಲರು ಏನು ಮಾಡುವಿರಿ? ಬಾಪ್‌ದಾದಾರವರಿಗೆ ಹೊಸ ವರ್ಷದ ಉಪಹಾರ ಕೊಡುವಿರೋ ಅಥವಾ ಇಲ್ಲವೋ? ಹೊಸ ವರ್ಷದಲ್ಲಿ ಏನು ಮಾಡುತ್ತೀರಿ? ಒಬ್ಬರಿನ್ನೊಬ್ಬರಿಗೆ ಉಪಹಾರ ಕೊಡುತ್ತೀರಲ್ಲವೇ. ಒಬ್ಬರು ಶುಭಾಷಯದ ಪತ್ರವನ್ನು ಕೊಡುತ್ತೀರಿ, ಒಬ್ಬರು ಉಪಹಾರವನ್ನು ಕೊಡುತ್ತೀರಿ. ಬಾಪ್‌ದಾದಾರವರಿಗೆ ಕಾರ್ಡ್(ಪತ್ರ) ಬೇಡ, ರಿಕಾರ್ಡ್ ಬೇಕು. ಎಲ್ಲಾ ಮಕ್ಕಳ ರಿಕಾರ್ಡ್ ನಂಬರ್ ಒನ್ ಆಗಿರಬೇಕು, ಈ ರಿಕಾರ್ಡ್ ಬೇಕು. ನಿರ್ವಿಘ್ನರಾಗಿರಲಿ, ಈಗೀನ್ನೂ ಕೆಲ-ಕೆಲ ವಿಘ್ನದ ಮಾತುಗಳನ್ನು ಕೇಳುತ್ತೀರಲ್ಲವೇ, ಅಂದಾಗ ಬಾಪ್‌ದಾದಾರವರಿಗೆ ಒಂದು ನಗುವಿನ ಆಟ ನೆನಪಿಗೆ ಬರುತ್ತದೆ. ಆ ನಗುವಿನ ಆಟ ಯಾವುದೆಂದು ಗೊತ್ತಿದೆಯೇ? ಅದು ಆಟವಾಗಿದೆ – ವೃದ್ಧರು ಗೊಂಬೆಗಳ ಆಟವಾಡುತ್ತಿದ್ದಾರೆ. ವೃದ್ಧರಾಗಿದ್ದಾರೆ ಆದರೆ ಗೊಂಬೆಗಳ ಆಟವಾಡುತ್ತಿದ್ದಾರೆ, ಅಂದಾಗ ನಗುವಿನ ಆಟವಲ್ಲವೇ. ಈಗ ಏನೆಲ್ಲಾ ಚಿಕ್ಕ ಚಿಕ್ಕ ಮಾತುಗಳನ್ನು ಕೇಳುತ್ತೀರಿ, ನೋಡುತ್ತೀರಿ, ಅನಿಸುತ್ತದೆ ಇವರು ವಾನಪ್ರಸ್ಥಿಗಳು ಮತ್ತು ಇವೆಲ್ಲಾ ಮತುಗಳು ಚಿಕ್ಕದಾಗಿವೆ. ಈ ರಿಕಾರ್ಡ್ ತಂದೆಗೆ ಇಷ್ಟವಾಗುವುದಿಲ್ಲ. ಇದರ ಬದಲಾಗಿ (ಕಾರ್ಡ್ ಬದಲಾಗಿ) ರಿಕಾರ್ಡ್ ಕೊಡಿ - ನಿರ್ವಿಘ್ನ, ಚಿಕ್ಕ ಮಾತುಗಳು ಸಮಾಪ್ತಿ. ದೊಡ್ಡದನ್ನು ಚಿಕ್ಕದನ್ನಾಗಿ ಮಾಡುವುದನ್ನು ಕಲಿಯಿರಿ ಮತ್ತು ಚಿಕ್ಕದನ್ನು ಸಮಾಪ್ತಿ ಮಾಡಲು ಕಲಿಯಿರಿ.

ಬಾಪ್‌ದಾದಾರವರು ಒಬ್ಬೊಬ್ಬ ಮುಗುವಿನ ಮುಖವನ್ನು, ಬಾಪ್‌ದಾದಾರವರ ಮುಖವನ್ನು ನೋಡುವ ದರ್ಪಣವನ್ನಾಗಿ ಮಾಡಲು ಬಯಸುತ್ತಾರೆ. ನಿಮ್ಮ ದರ್ಪಣದಲ್ಲಿ ಬಾಪ್‌ದಾದಾರವರು ಕಾಣಿಸಲಿ. ಇಂತಹ ವಿಚಿತ್ರ ದರ್ಪಣವನ್ನು ಬಾಪ್‌ದಾದಾರವರಿಗೆ ಉಪಹಾರವನ್ನಾಗಿ ಕೊಡಿ. ಪರಮಾತ್ಮ ಕಾಣಿಸುವಂತಹ ದರ್ಪಣ ಪ್ರಪಂಚದಲ್ಲಿ ಇಲ್ಲವೇ ಇಲ್ಲ. ನೀವು ಈ ಹೊಸ ವರ್ಷದ ಇಂತಹ ಉಪಹಾರವನ್ನು ಕೊಡಿ ಇದೊಂದು ವಿಚಿತ್ರ ದರ್ಪಣವಾಗಿ ಬಿಡಲಿ. ಯಾರೇ ನೋಡಲಿ, ಯಾರೇ ಕೇಳಲಿ ಅವರಿಗೆ ಬಾಪ್‌ದಾದಾರವರೇ ಕಾಣಿಸಲಿ, ಕೇಳಲಿ. ತಂದೆಯ ಧ್ವನಿಯೇ ಕೇಳಲಿ. ಹಾಗಾದರೆ ಗಿಫ್ಟನ್ನು (ಉಪಹಾರವನ್ನು) ಕೊಡುವಿರಾ? ಕೊಡುವಿರಾ? ಯಾರು ಕೊಡುವುದರ ದೃಢ ಸಂಕಲ್ಪ ಮಾಡಿದ್ದಿರೋ ಅವರು ಕೈಯನ್ನು ಎತ್ತಿರಿ. ದೃಢ ಸಂಕಲ್ಪದ ಕೈಯನ್ನು ಎತ್ತಿರಿ. ಡಬಲ್ ವಿದೇಶದವರು ಕೈಯನ್ನು ಎತ್ತುತ್ತಿದ್ದಾರೆ. ಈಗ ಎಲ್ಲರಿಗೂ ಏನು ಕೊಡಬೇಕು, ನೆನಪಿದೆಯೇ ಗಿಫ್ಟ್ ಮತ್ತು ರೆಕಾರ್ಡ್.  ದರ್ಪಣವಾದಾರೆ ರೆಕಾರ್ಡ್ ಸ್ವತಹವಾಗಿ ಬಂದುಬಿಡುತ್ತದೆ ಈಗ ಬಾಪ್‌ದಾದಾ ಶ್ರಮದ ಪುರುಷಾರ್ಥವನ್ನು ನೋಡಬೇಕೆಂದುಕೊಳ್ಳುತ್ತಿಲ್ಲ. ಈಗ ಚಿಕ್ಕ ಚಿಕ್ಕ ವಿಷಯಗಳಲ್ಲಿ ಶ್ರಮ ಮಾಡಬೇಡಿರಿ. ಹಾರಿಬಿಡಿ ಮೇಲೆ ಇದ್ದಾಗ ಉಳಿದ ಎಲ್ಲಾ ವಿಷಯಗಳು ಕೆಳಗೆ ಇದ್ದುಬಿಡುತ್ತವೆ. ಎಲ್ಲಾ ಕಡೆಯಿಂದ ಕಾರ್ಡ್ಸ್ ಬಹಳ ಬಂದಿವೆ.  ಆದರೆ ಕಾರ್ಡುಗಳನ್ನು ಕಳುಹಿಸಿರುವವರಿಗೆ ಬಾಪ್‌ದಾದಾ ಹಿಂತಿರುಗಿ ಪ್ರಿಯ ಸ್ಮೃತಿಗಳನ್ನು ಆಶೀರ್ವಾದಗಳೊಂದಿಗೆ ರೆಕಾರ್ಡನ್ನು ತೋರಿಸಿರಿ ಎಂದು ಹೇಳುತ್ತಿದ್ದಾರೆ.  ಕಾರ್ಡು ಕಳಿಸುವುದಕ್ಕಾಗಿ ಶುಭಾಶಯಗಳು ಆದರೆ ರೆಕಾರ್ಡ್ ತೋರಿಸಿದರೆ ಬಹಳ ಬಹಳ ಶುಭಾಶಯಗಳು. ಗೊಂಬೆಗಳನ್ನು ಸಹ  ಕಳುಹಿಸುತ್ತಿದ್ದಾರೆ ಉತ್ತರಗಳನ್ನು ಸಹ ಕಳುಹಿಸುತ್ತಿದ್ದಾರೆ. ಡಬಲ್ ವಿದೇಶಿಯರ ಒಂದು ವಿಶೇಷತೆ ತಂದೆಗೆ ಬಹಳ ಇಷ್ಟವೆನಿಸುತ್ತದೆ. ಜಾನಕಿ ಮಗು ಸಹ ಕೇಳುತ್ತಿದೆ. ವಿದೇಶದ ಫಲಿತಾಂಶವನ್ನು ನೋಡಿ ಖುಷಿಪಡುತ್ತಿದ್ದಾರೆ. ಅವರ ಒಂದು ವಿಶೇಷತೆ ಏನೆಂದರೆ ಸತ್ಯವನ್ನು ಮಾತನಾಡುತ್ತಾರೆ. ಸತ್ಯವಾದ ಮನಸ್ಸಿಗೆ ಪ್ರಭು ರಾಜಿಯಾಗುತ್ತಾರೆ (ಪ್ರಸನ್ನ ರಾಗುತ್ತಾರೆ). ಅಲುಗಾಡಿದರೂ ಏರುಪೇರಾದರೂ ಸತ್ಯವನ್ನೇ ಮಾತನಾಡುತ್ತಾರೆ ಮತ್ತು ಯಾರಾದರೆ ಸತ್ಯವನ್ನು ಮಾತನಾಡುತ್ತಾರೆಯೋ ಅವರ ತಪ್ಪು ಅರ್ಧ ಕ್ಷಮಿಸಲ್ಪಡುತ್ತದೆ.  ಆದ್ದರಿಂದಲೇ ಬಾಪ್‌ದಾದಾರವರಿಗೆ ಈ ವಿಶೇಷತೆ ಚೆನ್ನಾಗಿ ಅನಿಸುತ್ತದೆ.  ಏಕೆಂದರೆ ಯಾರಾದರೆ ಅಸತ್ಯವನ್ನು ಮಾತನಾಡುತ್ತಾರೆಯೋ ಅಸತ್ಯ  ಎಂತಹದ್ದೆಂದರೆ ಒಳಗಿನಿಂದಲೇ ಮನಸ್ಸನ್ನು  ತಿನ್ನುತ್ತಾ ಇರುತ್ತದೆ. ಯಾವುದಾದರೂ ಮುಳ್ಳು ಕಾಲಿನಲ್ಲಿ ಕುಚ್ಚಿಕೊಂಡಾಗ ಏನಾಗುತ್ತದೆ? ಒಳಗೊಳಗೆ ಕುಚ್ಚುತ್ತಿರುತ್ತದೆಯಲ್ಲವೇ. ಹಾಗೆಯೇ ಅಸತ್ಯ ಮಾತನಾಡುವವರಿಗೆ ಒಳಗೆ ಯಾವಾಗಲೂ ಸಂತೋಷವಿರುವುದಿಲ್ಲ.  ಯಾವುದೊ ಒಂದು ಸಮಸ್ಯೆ ಬರುತ್ತದೆ ಆದ್ದರಿಂದ ಸ್ಪಷ್ಟ ಆತ್ಮರಾಗುವುದರ ಮೂಲಕ ಸ್ಪಷ್ಟತೆ ಎಂಬುದು ಶ್ರೇಷ್ಠವರನ್ನಾಗಿ ಮಾಡುತ್ತದೆ.  ಸಹಾಯವು ಲಭಿಸುತ್ತದೆ. ಲಿಫ್ಟ್ ಲಭಿಸುತ್ತದೆ ಆದ್ದರಿಂದ ನಿಮ್ಮ ವಿಶೇಷತೆಯನ್ನು ಯಾವಾಗಲೂ ಕಡಿಮೆ ಮಾಡಿಕೊಳ್ಳಬಾರದು. ಈ ವಿಶೇಷತೆ ನಿಮಗೆ ಸಹಾಯ ಮಾಡುತ್ತದೆ.

**ನಾಲ್ಕೂ ಕಡೆಯ ಅಖಂಡ ಮಹಾದಾನಿ ಮಕ್ಕಳಿಗೆ, ನಾಲ್ಕೂ ಕಡೆಯ ತಂದೆಯ ಬಲಭುಜಗಳು, ಆಜ್ಞಾಕಾರಿ ಭುಜಗಳಿಗೆ, ನಾಲ್ಕೂ ಕಡೆಯ ಸರ್ವಾಆತ್ಮರಿಗೆ ಸಾಹಸದ(ಧೈರ್ಯ) ರೆಕ್ಕೆಗಳನ್ನು ನೀಡುವಂತಹ ಧೈರ್ಯವಂತ ಆತ್ಮರಿಗೆ, ನಾಲ್ಕೂ ಕಡೆಯ ಸದಾ ತಂದೆಯ ಸಮಾನ ಪ್ರತಿಯೊಂದು ಕರ್ಮದಲ್ಲಿ ಅನುಕರಣೆ ಮಾಡುವಂತಹ ಬ್ರಹ್ಮಾತಂದೆ ಮತ್ತು**

**ಜಗದಾಂಬಾರವರ ಶಿಕ್ಷಣವನ್ನು ಸದಾ ಪ್ರತ್ಯಕ್ಷ ಜೀವನದಲ್ಲಿ ತರುವಂತಹ ಸರ್ವ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ, ಆಶೀರ್ವಾದ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 31-12-2003.
***ಈ ವರ್ಷ ನಿಮಿತ್ತ ಮತ್ತು ನಿರ್ಮಾಣವಾಗಿ ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳಿ ಮತ್ತು ಅಖಂಡ ಮಹಾದಾನಿಗಳಾಗಿ.***

ಸಹಜವಾಗಿ ಜಮಾದ ಖಾತೆಯನ್ನು ಹೆಚ್ಚಿಸಿಕೊಳ್ಳುವ ಗೋಲ್ಡನ್ ಬೀಗದ ಕೈ ಯಾವುದೆಂದರೆ ಮನಸಾ, ವಾಚಾ, ಕರ್ಮಣಾ ಸೇವೆಯಲ್ಲಿ ನಿಮಿತ್ತ ಭಾವ, ನಿರ್ಮಾಣ ಭಾವ, ಶುಭ ಭಾವ, ಆತ್ಮಿಕ ಸ್ನೇಹದ ಭಾವವಾಗಿದೆ.. ಬಾಪ್‌ದಾದಾರವರು ಒಬ್ಬೊಬ್ಬ ಮುಗುವಿನ ಮುಖವನ್ನು, ಬಾಪ್‌ದಾದಾರವರ ಮುಖವನ್ನು ನೋಡುವ ದರ್ಪಣವನ್ನಾಗಿ ಮಾಡಲು ಬಯಸುತ್ತಾರೆ. ನಿಮ್ಮ ದರ್ಪಣದಲ್ಲಿ ಬಾಪ್‌ದಾದಾರವರು ಕಾಣಿಸಲಿ. ಇಂತಹ ವಿಚಿತ್ರ ದರ್ಪಣವನ್ನು ಬಾಪ್‌ದಾದಾರವರಿಗೆ ಉಪಹಾರವನ್ನಾಗಿ ಕೊಡಿ. ಎನ್ನುತ್ತಾ ಅನೇಕ ಭುಜದಾರಿ ಬಾಪ್‌ದಾದಾರವರು ಮಾತನಾಡಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಾಪ್‌ದಾದಾರವರ ನಂಬರ್ ವನ್, ಆಲ್ರೌಂಡರ್, ಎವೆರ್ರೆಡಿ ಮತ್ತು ಆಜ್ಞಾಕಾರಿ ಬಲಭುಜವಾಗಿದ್ದೇನೆ

2. ನಾನು ವಿಶ್ವಾತ್ಮರಿಗೆ ಅನುಭವವೆಂಬ ಧೈರ್ಯದ ರೆಕ್ಕೆಗಳನ್ನು ನೀಡಿ ಸರ್ವರನ್ನು ಸರ್ವಪ್ರಾಪ್ತಿ ಸ್ವರೂಪರನ್ನಾಗಿ ತಯಾರು ಮಾಡಿದ್ದೇನೆ.

3. ನಾನು ಮನಸ್ಸಿನ ತರಂಗಗಳ ಮೂಲಕ ನಿರಂತರ ಶಕ್ತಿಗಳ ಅನುಭವವನ್ನು, ವಾಚಾದ ಮೂಲಕ ಜ್ಞಾನದ ದಾನವನ್ನು, ಕರ್ಮದ ಮೂಲಕ ಗುಣಗಳ ದಾನವನ್ನು ಮಾಡುವ ಅಖಂಡ ಮಹಾದಾನಿ.

4. ನಾನು ಸ್ವಯಂ ಸಂತುಷ್ಟವಾಗಿದ್ದು ಜೊತೆ ಜೊತೆ ಯಾರ ಸೇವೆಯನ್ನು ಮಾಡುತ್ತಿದ್ದೇನೆಯೋ ಆ ಆತ್ಮರನ್ನೂ ಖುಷಿಯ ಸಂತುಷ್ಟತೆಯಲ್ಲಿರುವಂತೆ ಮಾಡಿ ಸೇವೆಯ ಫಲವನ್ನು ಜಮಾ ಮಾಡಿಕೊಂಡಿದ್ದೇನೆ.

5. ನಾನು ಸಂಗಮಯುಗದಲ್ಲಿ ಸೇವೆಯ ಫಲವನ್ನು ಜಮಾ ಮಾಡಿಕೊಂಡು ಇಡೀ ಕಲ್ಪದ ಪ್ರಾಲಬ್ಧ(ಸರ್ವಪ್ರಾಪ್ತಿಗಳು, ಸರ್ವಖಜಾನೆಗಳು, ವಾರಸತ್ವ) ಸ್ವರೂಪವಾಗಿದ್ದೇನೆ.

6. ನಾನು ನನ್ನ ಜಮಾದ ಖಾತೆಯನ್ನು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಳ್ಳುವ ಪರಿವರ್ತಕನು.

7. ನಾನು "ನಾನು" ಎಂಬ ರಾಯಲ್ ರೂಪದ ನನ್ನತನವನ್ನು ಸಮಾಪ್ತಿ ಮಾಡಿ ಮಾಡಿಸುವವರು ಮಾಡಿಸುತ್ತಿದ್ದಾರೆ ಎಂಬ ಧಾರಣೆಯಿಂದ ತಂದೆಯ ಸಮಾನವಾಗಿ ತಯಾರಾಗಿದ್ದೇನೆ.

8. ನಾನು ಯಾವುದೇ ವಿಚಾರವನ್ನು ತಿಳಿಸುವಾಗ ಮಾಲೀಕನಾಗಿ, ಅದು ಮೆಜಾರಿಟಿ ಆತ್ಮರಿಂದ ಅಂತಿಮ ತೀರ್ಮಾನವಾದ ಮೇಲೆ ಬಾಲಕನಾಗಿ ಇರುತ್ತಿದ್ದೇನೆ.

9. ನಾನು ಮನಸ್ಸಿನಲ್ಲಿ ನಿರಾಕಾರಿ, ಮಾತಿನಲ್ಲಿ ನಿರಹಂಕಾರಿ, ಕರ್ಮದಲ್ಲಿ ನಿರ್ವಿಕಾರಿಯಾಗಿದ್ದೇನೆ.

10. ನನ್ನಿಂದ ಎಲ್ಲರೂ ಶಕ್ತಿಯನ್ನು,  ಶಾಂತಿಯನ್ನು ಅನುಭವ ಮಾಡಿ ಶಿವತಂದೆಯ ಸಂಬಂಧದಲ್ಲಿ ಬರುತ್ತಿದ್ದಾರೆ.

11. ನಾನು ನಂಬರ್ ವನ್ನಾಗಿ ನಿರ್ವಿಘ್ನವಾಗಿ ಬಾಪ್‌ದಾದಾರವರಿಗೆ ಕಾರ್ಡ್ ನ ಬದಲಾಗಿ ರೆಕಾರ್ಡನ್ನು ಕೊಟ್ಟಿದ್ದೇನೆ.

12. ನಾನು ಸತ್ಯವಾಗಿ, ಸ್ಪಷ್ಟವಾಗಿ ಇರುವ ಶ್ರೇಷ್ಠಾತ್ಮನಾಗಿದ್ದೇನೆ.